Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 Zone 1, R. I. Dist. 3182 Charter Date : 04-03-1986



Rtn. Francesco Arezzo
RI President




Rtn. Palaksha K.
Dist. Governor




Rtn. PHF. I. Narayana
Asst. Governor



Rtn. Koushik Yadiyal
Zonal Lieutenant



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor



40h year of Service and Fellowship

Volume 40 Issue - 13 2nd October 2025

## CLUB ASSEMBLY

Time : 7.00 p.m.
Venue : Hotel Shivaprasad Grand, Kundapura

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನನ್ನು ಸಂಪನ್ಮೂಲ ವ್ಯಕ್ತಿಯಾಗಿ ವಾರದ ಸಭೆಯಲ್ಲಿ ಆಯುರ್ವೇದ ದಿನಾಚರಣೆಯ ಸಲುವಾಗಿ ಮಾತನಾಡಿಸಿದ ತಮಗೆಲ್ಲರಿಗೂ ನಾನು ಧನ್ಯನಾಗಿದ್ದೇನೆ. ಆಯುರ್ವೇದ ಅವತರಣ ಬಹಳ ವಿಶಾಲವಾದ ವಿಚಾರ ಕೇವಲ ಹತ್ತು ಹದಿನೈದು ನಿಮಿಷಗಳಲ್ಲಿ ಹೇಳುವಂತದ್ದಲ್ಲ. ಆದರೂ ನನ್ನ ಚಿಕ್ಕ ಪ್ರಯತ್ನ ನಾನು ಮಾಡಿದ್ದು. ನಾನು ಮಾತನಾಡಲು ಸರಕಾದದ್ದು ಆಯುರ್ವೇದ ಇತಿಹಾಸದ ಪುಸ್ತಕ ಬರೆದ ಡಾ। ಅರ್ಹಂತ್ ಅವರನ್ನು ವಿಚಾರಿಸಿದಾಗ ತಿಳಿದ ವಿಚಾರ – ಭಾರದ್ವಜ ಮುನಿಯು ಭೂಮಿಯ ರೋಗ ಭರಿತ ದುಃಖದ ಸ್ಥಿತಿಯನ್ನು ದೇವೇಂದ್ರನ ಮುಂದೆ ಸವಿಸ್ತಾರವಾಗಿ ಬಿಚ್ಚಿಟ್ಟಾಗ ದೇವೇಂದ್ರನು ಆಯುರ್ವೇದವನ್ನು ಉಪದೇಶಿಸಿದನು. ನಂತರ ಭಾರದ್ವಜರು ಆಯುರ್ವೇದ ಜ್ಞಾನವನ್ನು ಅತ್ರಿ ಪುತ್ರನಾದ ಆತ್ರೇಯನಿಗೆ ಉಪದೇಶಿಸಿದರು. ತದನಂತರ ಆತ್ರೇಯ ತನ್ನ ಶಿಷ್ಯರಾದ ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ, ಹಾರೀತ ಹಾಗೂ ಕ್ಷಾರಪಾಣಿ ಎಂಬ ಆರು ಶಿಷ್ಯರಿಗೆ ಭೋದಿಸಿದ. ಇವರು ತಮ್ಮ ತಮ್ಮ ಬುದ್ಧಿಮತ್ತೆಗನುಸಾರವಾಗಿ ಆಯುರ್ವೇದವನ್ನು ಲಿಖಿತ ರೂಪದಲ್ಲಿ ದಾಖಲಿಸಿದರು. ಈ ಲಿಖಿತ ರೂಪದ ಗ್ರಂಥಗಳು ಕಾಲಕ್ಕನುಸಾರವಾಗಿ ಹಲವು ಸಂಸ್ಕರಣೆಗೊಳಗಾಗಿ ಅನೇಕ ಗ್ರಂಥ ರೂಪದಲ್ಲಿ ಇಂದು ನಮ್ಮ ಕೈಲಿದೆ ಎಂದು ತಿಳಿಸಿದರು. ಶ್ರೀಯುತರಲ್ಲಿ ಇನ್ನೂ ನನ್ನ ಪ್ರಶ್ನೆ ಮುಂದುವರಿಸಿ ಕೇಳಿದೆ ಅದೇನೆಂದರೆ ಅಲೋಪತಿಯಲ್ಲಿ ಹಲವು ಖಾಯಿಲೆಗಳಿಗೆ ಸಾಕಷ್ಟು ಸಂಶೋಧನೆಗಳು ನಡೆದು ಹಾಗೂ ಇಂದೂ ನಡೆಯುತ್ತಿದೆ. ಆಯುರ್ವೇದದಲ್ಲಿ ಏಕೆ ಸಂಶೋಧನೆ ನಡೆಯುತ್ತಿಲ್ಲಾ? ಹಾಗೂ ಈ ಸಂಶೋಧನೆಗಳು ಬಹಳ ಹಿಂದೇ ನಡೆದಿದ್ದವೇ? ಆಗ ಶ್ರೀಯುತರು ಬಹಳ ಆಸಕ್ತಿದಾಯಕ ಮಾಹಿತಿಯನ್ನು ನೀಡಿದರು ಅವರ ಮಾತಿನಂತೆ ಆಯುರ್ವೇದವೆಂದರೆ ಹಿತ್ತಲ ಗಿಡದ ಮದ್ದಲ್ಲ, ಅಜ್ಜಿ ಮದ್ದಲ್ಲ, ಮನೆಮದ್ದಲ್ಲ, ಅಂಧ ಚಿಕಿತ್ಸೆಯಂತೂ ಅಲ್ಲವೇ ಅಲ್ಲ. ಬದಲಾಗಿ ವಿಜ್ಞಾನಾಧಾರಿತ ಹಲವು ಸಂಶೋಧಕರಿಂದ ಹಲವು ಅವಿಷ್ಕಾರಗಳನ್ನು ಮಾಡಿ ದಾಖಲಿಸಲ್ಪಟ್ಟ ಒಂದು ಉತ್ಕೃಷ್ಟ ವೈದ್ಯಕೀಯ ಶಾಸ್ತ್ರ. ಪ್ರಸ್ತುತವಿರುವ ವೈದ್ಯರು ಹಾಗೂ ವೈದ್ಯಕೀಯ ಪದ್ದತಿಗಳು ಊಹಿಸಲಾಗದಷ್ಟು ಸಂಶೋಧನೆಗಳು ಆಯುರ್ವೇದದಲ್ಲಾಗಲೇ ಹಲವು ಸಾವಿರ ವರುಷಗಳ ಹಿಂದೇ ನಡೆದು ಹೋಗಿದೆ. ಇವತ್ತಿನ ಸಂಶೋಧನೆಗಳು ಏನಿದ್ದರೂ ಹಿಂದಿನ ಸಂಶೋಧನೆಯನ್ನು ಪುಷ್ಟೀಕರಣಗೊಳಿಸುವ ಧಾಖಲೆ ಮಾಹಿತಿಗಳಷ್ಟೆ. ಕಟು ಸತ್ಯವೆಂದರೆ ಈ ರೀತಿಯ ಹತ್ತು ಹಲವು ಅತ್ಯುನ್ನತ ಸಂಶೋಧನೆಗಳ ಸಂಪೂರ್ಣ ವಿವರ ಪ್ರಸ್ತುತ ನಮ್ಮ ಕೈಯಲ್ಲಿಲ್ಲದಿರುವುದು. ಭಕ್ತಿಯಾರ್ ಖಿಲ್ಜಿಯ ದಾಳಿಯಿಂದ ನಳಂದಾ ವಿಶ್ವ ವಿದ್ಯಾನಿಲಯದ ಧ್ವಂಸದಿಂದಲೋ, ಹನ್ಸ್ ಹಾಗೂ ಅಲೆಕ್ಸಾಂಡರ್‌ನ ದುರ್ಬುದ್ಧಿಯಿಂದ ತಕ್ಷಶಿಲಾ ವಿದ್ಯಾನಿಲಯದ ನಾಶದಿಂದಲೋ, ಹಲವಾರು ಹೊರ ದೇಶದ ದೊರೆಗಳ ಸಂಕುಚಿತ ಮನೋಭಾವನೆಯಿಂದಲೋ, ಬ್ರಿಟಿಷ್, ಡಚ್, ಫ್ರೆಂಚ್ ಮುಂತಾದ ಆಕ್ರಮಣಕಾರರಿಂದಲೋ ಸಾವಿರಾರು ವರುಷದಿಂದ ಸಂಶೋಧಿಸಲ್ಪಟ್ಟ ಅಗಣಿತ ವಿಶೇಷ ಆರೋಗ್ಯ ಸಂಬಂಧಿ ವಿಷಯಗಳು ನಮ್ಮ ಕೈತಪ್ಪಿ ಹೋಗಿದೆ. ಈ ನಡುವೆಯೂ ಸಾವಿರಾರು ವೈದ್ಯಕೀಯ ವಿಷಯಾಧಾರಿತ ತಾಳೇಗರಿಯ ಹಸ್ತ ಪ್ರತಿಗಳೋ, ಹಲವಾರು ವಿಶ್ವ ವಿದ್ಯಾನಿಲ್ಯಗಳ ಗ್ರಂಥಾಲಯದಲ್ಲಿ ಹಸ್ತಪ್ರತಿಗಳ ಕೇಂದ್ರಗಳಲ್ಲಿ, ನಮ್ಮ ಅಜ್ಜ ಅಜ್ಜಿಯಂದಿರ ರಹಸ್ಯ ಕವಾಟಿನೊಳಗಡೆಯಲ್ಲಿ ಗೌಪ್ಯವಾಗಿದೆ. ಈ ಎಲ್ಲಾ ಹಸ್ತ ಪ್ರತಿಗಳನ್ನು ಬೆಳಕಿಗೆ ತಂದು ಆಯುರ್ವೇದವನ್ನು ಪುನರ್ಜೀವನಗೊಳಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ? ಎಂಬ ಚಿಂತನೆ ನನ್ನ ಮುಂದಿಟ್ಟರು. ಮಿತ್ರರೇ ಆಯುರ್ವೇದದ ಪುನರುತ್ಥಾನಕ್ಕೆ ತಮ್ಮ ಕೊಡುಗೆಯನ್ನು ಇತ್ತ ಹಾಗೂ ಪೋಷಿಸಿದ ಈ ದೇಶದ ಗೌರವಾನ್ವಿತರಾದ ಶ್ರೀಯುತ ನಾಲ್ವಡಿ ಕೃಷ್ಣರಾಜ ಒಡೆಯರ್, ಶ್ರೀ ಮದನಮೋಹನ ಮಾಳವೀಯ ಹಾಗೂ ಇಂದಿನ ಈ ಶತಮಾನದ ಆಯುರ್ವೇದದ ಬೆಳವಣಿಗೆ ಹಾಗೂ ಕೀರ್ತಿಗಾಗಿ ತನ್ನ ಸಂಪೂರ್ಣ ಶಕ್ತಿಯನ್ನೇ ಧಾರೆಯೆರೆದು ಪೋಷಿಸುತ್ತಿರುವ ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರಿಗೆ ನಾವೆಲ್ಲರೂ ನಿತ್ಯ ನೆನೆದು ನಮಿಸುವ ಧರ್ಮ ನಮ್ಮದಾಗಿದೆ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ.25–09–2025 ರಂದು ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ವಾರದ ಸಭೆಗೆ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ನಮ್ಮ ಸಂಸ್ಥೆಯ ಸದಸ್ಯ ರೊ. ರಮಾನಂದ ಕಾರಂತ್ ಅವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸಲಾಯಿತು. ರೊ. ರಮಾನಂದ ಕಾರಂತ್ ಆಯುರ್ವೇದ ಅವತರಣದ ಬಗ್ಗೆ ಉಪಯುಕ್ತ ಮಾಹಿತಿ ಇತಿಹಾಸದ ಉಲ್ಲೇಖದೊಂದಿಗೆ ವಿವರಿಸಿದರು. ಆಗಮಿಸಿದ ಸದಸ್ಯರುಗಳನ್ನು ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ರೊ. ಸತ್ಯನಾರಾಯಣ ಪುರಾಣಿಕ್ ವಾರದ ವರದಿ ವಾಚಿಸಿದರು. ರೊ. ಸೀತಾರಾಮ ನಕ್ಕತ್ತಾಯ ವಾರದ ಚಿಂತನೆಯನ್ನು ಮಂಡಿಸಿದರು. ರೊ. ಕೆ. ಕೆ. ಕಾಂಚನ್ ರೋಟರಿ ಮಾಹಿತಿ ತಿಳಿಸಿದರು. ಕಾರ್ಯಕ್ರಮದಲ್ಲಿ Zone1, Asst. Governor Rtn. I. Narayan ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮುಖೇನಾ ಆಚರಿಸಲಾಯಿತು. ರೊ. ಉಮೇಶ್ ಪುತ್ರನ್ ಅವರು ರೊ. ಐ.ನಾರಾಯಣ್ ತಮ್ಮ ಭಾಷಣದ ಮುಖೇನ ಶುಭಾಶಯವನ್ನು ತಿಳಿಸಿದರು. ಈ ಸಂದರ್ಭದಲ್ಲಿ ವಲಯ ತರಬೇತುದಾರ ರೊ. Jayaprakash Shetty ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ರೊ. ಸುರೇಖಾ ಪುರಾಣಿಕ್ ನೆರವೇರಿಸಿದರು. ರೊ. ಡಾ. ಉತ್ತಮ ಕುಮಾರ್ ಶೆಟ್ಟಿ










ಕಾರ್ಯಕ್ರಮದ ಕೊನೆಯಲ್ಲಿ ಹಾಸ್ಯವನ್ನು ನೆರವೇರಿಸಿದರು. ರೊ. ಅನಿಲ್ ಡಿಸಿಲ್ವಾ ಆಗಮಿಸಿದ ಸರ್ವರಿಗೂ ಧನ್ಯವಾದಗಳು ಅರ್ಪಿಸಿದರು. ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯಿಂದ ಆಯೋಜಿಸಲ್ಪಡುವ ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧಾವಳಿಯ ಆಯೋಜನೆಯ ಸಂಚಾಲಕರನ್ನಾಗಿ ರೊ. ಶ್ರೀನಾಥ ರಾವ್ ಅವರನ್ನು ನಿಯುಕ್ತಿಗೊಳಿಸಲಾಯಿತು.



**71st Birthday celebration of Assistant Governor Rtn. I. Narayan at our weekly meeting on 25-09-2025**



**Birthday Celebration of Rtn. Shekar Shetty**




Beech cleaning organised by Municiple corporation, Taluk administration, Clean Kundapur Project and Rotary Club Kundapura South and Reverside.

## ಹುಟ್ಟುಹಬ್ಬದ ಶುಭಾಶಯಗಳು



ರೊ. ಸುರೇಶ್ ಮಲ್ಯ
ದಿನಾಂಕ : ಅಕ್ಟೋಬರ್ 08
ಮೊಬೈಲ್ : 9448529925

**"The soul becomes dyed with the colour of its thoughts."**
**- Marcus Aurelius, Meditations**



Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathaya
2001-02


Rtn. Dr. Umesh Puthran
2003-04


Rtn. A. Shantharam Pai
2005-06

## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು--83

## ಆತ್ಮ ಸಾಕ್ಷಾತ್ಕಾರದ ಮೆಟ್ಟಿಲುಗಳು ಶಿಷ್ಯನ ಪ್ರಶ್ನೆಗಳಿಗೆ ಗುರುವಿನ ಮೆಚ್ಚುಗೆ

ಮನುಸ್ಮೃತಿಯಲ್ಲಿ (6.46) "ಮಾತುಗಳನ್ನು ಸತ್ಯದಲ್ಲಿ ಮುಳುಗಿಸಿ ಆಡಬೇಕು ಮತ್ತು ಯಾವುದೇ ಕ್ರಿಯೆಯನ್ನು ಯೋಚಿಸಿ ಮಾಡಬೇಕು". ನಾವಾಡುವ ಮಾತು ಯಾವಾಗಲೂ ಸತ್ಯವೇ ಆಗಿರಬೇಕು ಮತ್ತು ವದಂತಿ ಹರಡುವುದು, ಗುಲ್ಲೆಬ್ಬಿಸುವುದು ಇವುಗಳಿಂದ ದೂರವಿರಬೇಕು. ಮಾತನಾಡಲು ಯೋಗ್ಯ ವಿಷಯವಿರದಿದ್ದರೆ ಸುಮ್ಮನಿರುವುದೇ ಲೇಸು. ಮತ್ತು ನಮ್ಮ ವರ್ತನೆಗಳು ಆಳವಾದ ಯೋಚನೆಗಳಿಂದ ಶುದ್ಧವಾಗಬೇಕು. ಅಂದರೆ ಯೋಚನಾಬದ್ಧ ವರ್ತನೆ.

ನಾವು ಮುನಿಯಾದರೆ ಯಾವ ಬದಲಾವಣೆಗಳಾಗುತ್ತವೆ, ಆಳವಾದ ಯೋಚನೆ ಮತ್ತು ಸತ್ಯದ ಬಗ್ಗೆ ಮಾಡುವ ಧ್ಯಾನ ಇವುಗಳಾ? ನಾವು ಉನ್ನತವಾದ ನಿರ್ವಿಕಲ್ಪಸ್ಥಿತಿಯನ್ನು ತಲುಪಿ ನಿರ್ವಾಣದ ಆನಂದವನ್ನು ಈ ಜನ್ಮದಲ್ಲಿಯೇ ಅನುಭವಿಸುತ್ತೇವೆ. ಬುದ್ಧಿವಂತ ವಿವೇಕಿಯು ಪರಬ್ರಹ್ಮನ ಅತೀಂದ್ರಿಯ ಸ್ಥಿತಿಯಾದ ನಿರ್ವಿಕಲ್ಪ ಸ್ಥಿತಿಯನ್ನು ಈ ರೀತಿಯಾಗಿ ಅನುಭವಿಸುತ್ತಾನೆ. ವಿವೇಕ ಚೂಡಾಮಣಿ ಗ್ರಂಥವು ನಮಗೆ ಈ ಸ್ಥಿತಿ ಯನ್ನು ತಲುಪುವುದು ಹೇಗೆ ಎಂದು ತಿಳಿಸಿಕೊಡುತ್ತದೆ. ನಾವು ನಮ್ಮ ಮನಸ್ಸನ್ನು ನಾಮ ರೂಪಗಳಿಂದ ಆಚೆ, ಸಾಪೇಕ್ಷಮಟ್ಟದಿಂದ ಪರಿಪೂರ್ಣ ಮಟ್ಟಕ್ಕೆ ತೆಗೆದು ಕೊಂಡು ಹೋಗಬೇಕು. ಈ ಪರಿಪೂರ್ಣ ಸ್ಥಿತಿಯೇ ನಿರ್ವಿಕಲ್ಪ ಸ್ಥಿತಿಯು. ಇದೊಂದು ಬದಲಾಗದ ವಿಕಲ್ಪ ವಿಲ್ಲದ ಸ್ಥಿತಿ. ಪರಿಪೂರ್ಣತೆಯಲ್ಲಿ ಯಾವುದೇ ಬದಲಾ ವಣೆ ಇರುವುದಿಲ್ಲ. ಇದು ಒಂದು ರೀತಿಯ ಅಲೆಗಳೇ ಇಲ್ಲದಿರುವ ಪೂರ್ಣ ಪ್ರಶಾಂತ ಸಾಗರದಂತೆ. ಮನಸ್ಸಿನ ಈ ಸ್ಥಿತಿಯೇ ಅವಿಕಲ್ಪ ಮತ್ತು ಈ ಸ್ಥಿತಿಯು ನಮಗೆ ಪ್ರಾಪ್ತವಾದರೆ ನಿರ್ವಾಣದ ಆನಂದಾನುಭವವು ಈ ಜನ್ಮದಲ್ಲಿಯೇ ದೊರೆಯುತ್ತದೆ.

ಸಾಮಾನ್ಯವಾಗಿ ಜನರು ಮರಣದ ನಂತರ ಸ್ವರ್ಗಕ್ಕೆ ಹೋಗಲು ಅಪೇಕ್ಷಿಸುತಾರೆ ಮತ್ತು ಸ್ವರ್ಗದ ಬಗ್ಗೆ ಚಪಲಚಿತ್ತದ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಆದರೆ ವೇದಾಂತದ ಪ್ರಕಾರ ಮರಣೋತ್ತರ ಸ್ವರ್ಗದ ಅವಶ್ಯಕತೆಯೇ ಇಲ್ಲ. ಯಾರು ಸ್ವರ್ಗದಬಗ್ಗೆ ಕೊರಗು ವರೋ ಅವರನ್ನು ವೇದಾಂತವು ಕ್ಷುಲ್ಲಕ ಜನರೆಂದು ಕರೆಯುತದೆ. ಪರಿಪೂರ್ಣನಾದ ಆತ್ಮನ ವೈಭವವು ಇಲ್ಲಿಯೇ ಇದೆ. ಆದ್ದರಿಂದ ಇಹೈವ, ಇಲ್ಲಿಯೇ ಎಂಬ ಪದಬಳಕೆ ಗೀತೆಯಲ್ಲಿಯೂ, ಉಪನಿಷತ್ತುಗಳಲ್ಲಿ ಯೂ ಪದೇಪದೇ ಕಂಡುಬರುತ್ತದೆ. ಆ ಪೂರ್ಣಾನಂದ ವನ್ನು ನಾವು ಇಲ್ಲಿಯೇ ಸಾಧಿಸಬಹುದು ಏಕೆಂದರೆ ಅದೇ ನಮ್ಮ ನೈಜ ಸ್ವಭಾವವು. ಅದು ಇಲ್ಲಿರದಿದ್ದರೆ ನಾವು ಬೇರೆಡೆ ಹುಡುಕಾಟದಲ್ಲಿ ತೊಡಗಬೇಕಾಗಿರುತ್ತಿತ್ತು.

ಪ್ರಸಿದ್ಧ ಸುಫಿ ಸಂತ ಪರ್ಷಿಯಾದ ಜಲಾಲುದಿನ್ ರುಮಿ ಹೇಳುತ್ತಾನೆ: "ಯಾವೊಬ್ಬ ಮನುಷ್ಯನ ಕವಚಗಳನ್ನು ಹೊರಗೆ ತೆಗೆದರೆ ಒಳಗೆ ಅವಿತಿರುವ ದೈವದ ದರ್ಶನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ." ಅಜ್ಞಾನ ವೆಂಬ ಪರದೆಯ ಹಿಂದೆ ಪರಬ್ರಹ್ಮನು ಅವಿತಿರುತ್ತಾನೆ. ಪರದೆಯನ್ನು ಕಳಚಿ ಬ್ರಹ್ಮನನ್ನು ಬಹಿರಂಗಪಡಿಸುವುದೇ ನಾವು ಮಾಡಬೇಕಾದ ಕೆಲಸ. ಮತ್ತು ಈ ಗ್ರಂಥವು ನಮಗೆ ಅತ್ಯಂತ ಕೆಳಮಟ್ಟದ ಕ್ರಿಮಿಗಳಂತೆ ಜೀವಿಸುವ ಹಂತದಿಂದ ಸಂಸಾರ ಬಂಧದಿಂದ ವಿಮೋಚನೆ ಹೊಂದುವ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಅದ್ಭುತ ಹಾದಿಯ ವಿವರಣೆಯನ್ನು ಹಂತ ಹಂತವಾಗಿ ವಿವರಿಸುತದೆ. ಇಂತಹ ಗ್ರಂಥಗಳು ನಮ್ಮದೇ ಗತಿಯಲ್ಲಿ ಈ ಮಾರ್ಗದಲ್ಲಿ ನಮ್ಮ ಮೊದಲ ಹೆಜ್ಜೆಯನ್ನು ಇಡಲು ಪ್ರಬಲವಾಗಿ ಪ್ರಚೋದಿಸುತ್ತವೆ. ಕೆಲವರು ವೇಗವಾಗಿ ಸಾಗಬಹುದು, ಆದರೆ ನಮಗೆ ನಮ್ಮದೇ ವೇಗ! ಈ ವಿಷಯದಲ್ಲಿ ಇತರರೊಡನೆ ಹೋಲಿಕೆ ಸಲ್ಲ. ನಮಗೆ ನಮ್ಮ ಶಕ್ತಿ ಏನೆಂಬ ಅರಿವು ಇರುತ್ತದೆ, ಅದರಂತೆ ನಾವು ಮುಂದುವರಿಯಬೇಕು. ಆಗಲೇ ನಾವು ಕಾರ್ಯಶೀಲರು. ಆದ್ದರಿಂದ ಇಲ್ಲಿಯೇ ನಾವು ನಿರ್ವಾಣದ ಅನುಭವ ಪಡೆಯಬಹುದು.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ ಮಧ್ಯಮಾಮ್।*ಅಸ್ಮದಾಚಾರ್ಯ
ಪರ್ಯಂತಾಮ್ ವಂದೇ ಗುರುಪರಂಪರಾಮ್॥

ಶ್ರೀ ಗುರುಚರಣಾರವಿಂದಾರ್ಪಣಮಸ್ತು... ಮುಂದುವರಿಯುವುದು.....

### THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Johnson D'Almeida**
**Mob. : 9620388881**

For Private Circulation only

Email id – rotaryclub.kundapurasouth@gmail.com


Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07


Rtn. T. Raghavendra Hatwar
2007-08


Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17


Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24


Rtn. Judith Mendonca
2024-25